ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಬಿ.ವಿ.ಕೆ ವಕೀಲವರಿಂದ:

ದಿ:15-06-1957 ಇಸವಿಯಲ್ಲಿ ನನ್ನ ತಂದೆ ದಾವಾ 1 ನೇ ಆಸ್ತಿಗೆ ಸಂಬಂಧಪಟ್ಟಂತೆ ಬಾಣಂದೂರು ಗ್ರಾಮದ ಬಿ.ಎನ್.ಮಲ್ಲಯ್ಯಅವರಿಗೆ ಭೋಗ್ಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಬಾಣಂದೂರು ವಾಸಿ ಗೌಡಪ್ಪನ ಮಗ ಗೌಡಯ್ಯ ಗೊತ್ತು. ದಿ:24-04-1961 ಲ್ಲಿ ಸರ್ವೇ ನಂಬರ್ 141/16 ರಲ್ಲಿ 30 ಗುಂಟೆಯನ್ನು ಗೌಡಯ್ಯ ಅವರಿಗೆ ಭೋಗ್ಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಭೋಗ್ಯಮಾಡಿದ ಆಸ್ತಿಗಳನ್ನು ನನ್ನ ತಂದೆ ಜೀವಂತ ಇದ್ದಾಗ ಅದನ್ನು ಬಿಡಿಸಿಕೊಳ್ಳಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಯಾವುದೇ ಭೋಗ್ಯ ಮಾಡಿರುವುದಿಲ್ಲ ಎಂದು ನುಡಿಯುತ್ತಾರ. ಸದರಿ ಭೋಗ್ಯವನ್ನು ನನ್ನ ಅಣ್ಣ ಶಿವಣ್ಣ ಬಿಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮದುವೆಯಾದಾಗಿನಿಂದ ನಾನು ಬೆಂಗಳೂರಿನಲ್ಲಿ ವ್ಯವಸಾಯ ಮಾಡುತ್ತಿದ್ದೆನಾ ಮಾಡಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ನಾನು ಯಾವತ್ತೂ ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಮದುವೆಗೆ ಮುಂಚೆ ವ್ಯವಸಾಯ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನನ್ನ ಅಣ್ಣಂದಿರ ಜೊತೆ ಜಂಟೀ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಭೋಗ್ಯ ಬಿಡುಗಡೆ ಮಾಡಲು ನಾನು ನನ್ನ ಅಣ್ಣಂದಿರಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ. ವಿಭಾಗ ಆಗಿದ್ದ ಬಗ್ಗೆ ನನಗೆ ಗೊತ್ತಿತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದೇ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಭಾಗ

ಮಾಡಿಕೊಂಡ 15 ದಿನಗಳ ನಂತರ ವಿಭಾಗ ಆಗಿದ್ದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ದಾವಾ ಆಸ್ತಿಗಳಲ್ಲಿ ನನಗೆ ಹಕ್ಕಿರುವ ಬಗ್ಗೆ ಪ್ರತಿವಾದಿಗಳಿಗೆ ನಾನು ನೋಟೀಸ್ ಕೊಟ್ಟಿರುತ್ತೇನೆ. ನಾನು ವಿಭಾಗ ಕೇಳುವಾಗ ನನ್ನ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳು ಹಾಜರಿದ್ದರು. ಅವರನ್ನು ಕರೆಯಿಸಿ ಸಾಕ್ಷಿ ನುಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ತಂದೆ ನನ್ನ ವಿವಾಹದ ಖರ್ಚಿಗೆ ಸಾಲ ಮಾಡಿದ್ದು ಅದನ್ನು ತೀರಿಸಲು ಭೋಗ್ಯಕ್ಕೆ ಹಾಕಿದ್ದರು ನಂತರ ಸದರಿ ಭೋಗ್ಯವನ್ನು ನನ್ನ ಅಣ್ಣ ಶಿವಣ್ಣ ತೀರಿಸಿರುತ್ತಾರೆ ಎಂದರೆ ಸರಿಯಲ್ಲ. 1957 ರಿಂದ ನನ್ನ ತಂದೆ ತೀರಿಕೊಳ್ಳುವ ವರೆಗೂ ದಾವಾ ಆಸ್ತಿಗಳು ನಮ್ಮ ಜಂಟೀ ಕುಟುಂಬದ ಸ್ವಾಧೀನದಲ್ಲಿ ಇರಲಿಲ್ಲ ಭೋಗ್ಯದಾರರ ಸ್ವಾಧೀನದಲ್ಲಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಹಕ್ಕಿಲ್ಲದೇ ಇದ್ದರೂ ಕೂಡ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ
ರಾಮನಗರ.